**Total No. of Questions – 12** **Total No. of Pages – 04**

**Code No. – M.K. 01**

# स्नातकपरीक्षाः – 2014

## बि.ए. I, विद्वन्मध्यमा – प्रथमवर्षः

## भाषापत्रिका

## पत्रिका – 2

## विषयः – ಕನ್ನಡ

दिनाङ्कः – 19.03.2014 गरिष्ठाङ्काः -100

समयः – मध्याह्ने 2 तः 5 पर्यन्तम् **Max Marks 100**

---

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ :** **10 x 01 = 10**

**1.** 'ತಾಳ್ಮೆ' ಪದದ ವಿರುದ್ಧ ಪದ ________ .

ಅ) ದುಡುಕು. ಆ) ನಿಧಾನಿಸು. ಇ) ತಾಳು. ಈ) ಮಿಡುಕು.

**2.** 'ಸುರಾಸುರ' ಶಬ್ದವು ________ ಸಂಧಿಗೆ ಉದಾಹರಣೆಯಾಗಿದೆ.

ಅ) ಲೋಪಸಂಧಿ. ಆ) ಆದೇಶಸಂಧಿ. ಇ) ಸವರ್ಣದೀರ್ಘಸಂಧಿ. ಈ) ಗುಣಸಂಧಿ.

**3.** 'ಸ್ಮಿತ' ಪದದ ಅರ್ಥ ________ .

ಅ) ಅಳು. ಆ) ನಗು. ಇ) ಸುವಾಸನೆ. ಈ) ಮುಖ.

**4.** 'ಮಹರ್ಷಿ' ಪದವನ್ನು ಬಿಡಿಸಿ ಬರೆದಾಗ ....

ಅ) ಮಹಾ+ಋಷಿ. ಆ) ಮಹ+ಋಷಿ. ಇ) ಮಹಾನ್+ಋಷಿ. ಈ) ಮಹತ್+ಋಷಿ.

**5.** ಇವುಗಳಲ್ಲಿ ಜೋಡುನುಡಿಗಳನ್ನು ಗುರುತಿಸಿ.

ಅ) ಹಣ್ಣುಹಂಪಲು. ಆ) ಬಾಬಾ. ಇ) ಪಟಪಟ. ಈ) ಗಳಗಳ.

**6.** ನಾಟಕವನ್ನು ಇಂಗ್ಲೀಷ್‌ಭಾಷೆಯಲ್ಲಿ ಹೀಗೆಂದು ಕರೆಯುತ್ತಾರೆ.

ಅ) POETRY. ಆ) LYRICS. ಇ) NOVEL. ಈ) DRAMA.

**7.** 'ಶಾಂತಿ' ಪದದ ತದ್ಭವ ರೂಪ.

ಅ) ಅಶಾಂತಿ. ಆ) ಭ್ರಾಂತಿ. ಇ) ಸಾಂತಿ. ಈ) ಕ್ರಾಂತಿ.

**8.** 'ದಕ್ಷ' ಪದದ ವಿರುದ್ಧ ಪದ.

ಅ) ಯಕ್ಷ. ಆ) ಕಕ್ಷ. ಇ) ಅಧ್ಯಕ್ಷ. ಈ) ಅದಕ್ಷ.

**9**. ‘ಕಂಬಿಕೀಳು’ ಎಂದರೆ ಅರ್ಥ ಇದಾಗಿದೆ.

**ಅ**) ಕಂಬಿಯನ್ನು ಕೀಳು. **ಆ**) ಓಡಿಹೋಗು. **ಇ**) ಕಂಬಿಯನ್ನು ಹಾಕು. **ಈ**) ಕಂಬಿ ಮುರಿ.

**10**. ಈ ಪದಗಳಲ್ಲಿ ಸರಿಯಾದ ಶಬ್ದ ಗುರುತಿಸಿ.

**ಅ**) ಏಶಿಯಾ. **ಆ**) ಏಷ್ಯ. **ಇ**) ಎಷ್ಯ. **ಈ**) ಏಷ್ಯಾ.

## II. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿಸಿ. **05 x 01 = 05**

**1.** ‘ಪ್ರಯಾಣ’ ಶಬ್ದದ ತದ್ಭವ ರೂಪ ________________ .

**2.** ‘ವಿನಯ’ ಪದದ ವಿರುದ್ಧ ಪದ ________________ .

**3.** ‘ಓರೆಗೆ ಹಚ್ಚು’ ಪದದ ಅರ್ಥ ________________ .

**4.** ಕನಕದಾಸರ ಮೊದಲ ಹೆಸರು ________________ .

**5.** ಬೇಂದ್ರೆಯವರ ಕಾವ್ಯನಾಮ ________________ .

## III. ಆವರಣದಲ್ಲಿ ಸೂಚಿಸಿದಂತೆ ಬರೆಯಿರಿ **05 x 01 = 05**

**1.** ಕಲುಷಿತಗೊಂಡಿದೆ ಇಂದಿನ ಬಹಳಷ್ಟು ಕೈಗಾರೀಕರಣದಿಂದ ನದಿಗಳು
(ಮೇಲಿನ ವಾಕ್ಯವನ್ನು ಸರಿಯಾದ ಅನುಕ್ರಮದಲ್ಲಿ ಜೋಡಿಸಿ ಬರೆಯಿರಿ.)

**2.** <u>ಹಳ್ಳಿಯಲ್ಲಿ</u> ಕಳ್ಳತನವಾಗಿತ್ತು. (ಗೆರೆ ಎಳೆದ ಪದದ ವಿಭಕ್ತಿ, ಪ್ರತ್ಯಯ ಗುರುತಿಸಿ ಬರೆಯಿರಿ.)

**3.** ಪೃಥ್ವಿ, ನೆಲ, ಭೂಮಿ, ಆಕಾಶ (ಗುಂಪಿಗೆ ಸೇರದ ಪದ ಗುರುತಿಸಿ.)

**4.** ಆಶ್ರಮವೆಂದರೆ ದಿನಾ ಜಪತಪ ಹೋಮವೇ. ತೆಗೆತೆಗೆ. (ಈ ವಾಕ್ಯದಲ್ಲಿರುವ ಜೋಡಿಪದ ಗುರುತಿಸಿ.)

**5.** ರಾವಣನು ಸೀತೆಯನ್ನು ಅಪಹರಿಸಿದನು. (ಈ ವಾಕ್ಯವನ್ನು ಭೂತಕಾಲಕ್ಕೆ ಪರಿವರ್ತಿಸಿ.)

## IV. ಹೊಂದಿಸಿ ಬರೆಯಿರಿ **05 x 01 = 05**

| **‘ಅ’** | | **‘ಆ’** |
|---|---|---|
| 1. ಶ್ರೀರಾಮಾಯಣದರ್ಶನಂ | – | ಕಾಳಿದಾಸ. |
| 2. ಅಹಲ್ಯೆ | – | ಡಿ.ವಿ.ಜಿ. |
| 3. ಸರಸರನೆ | – | ಕುವೆಂಪು. |
| 4. ಮೇಘದೂತ | – | ಪು.ತಿ.ನ. |
| 5. ಮಂಕುತಿಮ್ಮನ ಕಗ್ಗ | – | ಅನುಕರಣಾವ್ಯಯ. |

**V. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ –** **10 x 01 = 10**

1. 'ಸಂಸ್ಕೃತ ಮಾತೆ' ಕವನವನ್ನು ಬರೆದ ಕವಿ ಯಾರು ?
2. 'ರಥಸಪ್ತಮಿ' ಪ್ರಬಂಧ ಕರ್ತೃ ಯಾರು ?
3. 'ನಮ್ಮ ಮನೆಯ ದೀಪ' ಪ್ರಬಂಧ ಕರ್ತೃ ಯಾರು ?
4. 12ನೇ ಶತಮಾನದಲ್ಲಿ ವೀರಶೈವ ತತ್ತ್ವಜ್ಞಾನಿಯಾಗಿದ್ದ ಅನುಭವಮಂಟಪದ ಪೀಠಾಧ್ಯಕ್ಷ ಯಾರು ?
5. ಅಲ್ಲಮಪ್ರಭುವಿನ ವಚನಗಳ ಅಂಕಿತ ಯಾವುದು ?
6. 'ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಅಯ್ಯ? ' ಈ ಸಾಲು ಬರುವ ವಚನವನ್ನು ಬರೆದ ವಚನಕಾರ್ತಿ ಯಾರು ?
7. ಅನುಭವಮಂಟಪದ ಸ್ಥಾಪಕರು ಯಾರು ?
8. ತೀ.ತಾ. ಶರ್ಮರಿಗೆ ಇದ್ದ ಬಿರುದು ಯಾವುದು ?
9. ಪುರಂದರದಾಸರ ಮೊದಲ ಹೆಸರು ಏನಾಗಿತ್ತು ?
10. ಕನಕದಾಸರ ಜನ್ಮಸ್ಥಳ ಯಾವುದು ?

**VI. ಗದ್ಯಭಾಗ ಓದಿ ಕೆಳಲಾದ ಪ್ರಶ್ನೆಗಳಿಗೆ ಉತ್ತರಿಸಿ –** **05 x 01 = 05**

ಕಾಳಿದಾಸ! ಕಾಳಿದಾಸ! ಉಜ್ಜಯಿನಿಯ ಮನೆಮನೆಗಳಲ್ಲಿ ಕಾಳಿದಾಸನ ಹೆಸರು. ಆಸ್ಥಾನದಲ್ಲಿ ಕಾಳಿದಾಸನಿಗೆ ಅಗ್ರತಾಂಬೂಲ. ನನ್ನ ಕವಿತಾಶಕ್ತಿಯನ್ನು ಕಂಡು – 'ಇಂಥ ಕವಿ ಹಿಂದಾಗಲಿಲ್ಲ – ಮುಂದಾಗಲಾರ' ಎಂದು ಕೊಂಡಾಡುತ್ತಿದ್ದಾರೆ. ಈ ಕಾಳಿದಾಸನಿಗೆ ಯಾವ ಕೊರತೆಯೂ ಇಲ್ಲ. ಗೌರವವಿದೆ. ಸುಖ ಸಂಪತ್ತುಗಳಿವೆ. ಜನತೆಯ ದೃಷ್ಟಿಯಲ್ಲಿ ನನ್ನದು ಪೂರ್ಣ ಜೀವನ.

**ಪ್ರಶ್ನೆಗಳು :**

1. ಯಾವ ದೇಶದ ಮನೆಮನೆಗಳಲ್ಲಿ ಕಾಳಿದಾಸನ ಹೆಸರು ಕೇಳಿ ಬರುತ್ತಿದೆ ?
2. ಕಾಳಿದಾಸನಿಗೆ ಅಗ್ರತಾಂಬೂಲ ಎಲ್ಲಿ ಸಲ್ಲುತ್ತಿತ್ತು ?
3. ಕಾಳಿದಾಸನ ಬಗೆಗೆ ಎಲ್ಲರೂ ಏನೆಂದು ಕೊಂಡಾಡುತ್ತಿದ್ದರು ?
4. ಜನತೆಯ ದೃಷ್ಟಿಯಲ್ಲಿ ಕಾಳಿದಾಸನದು ಎಂಥಾ ಜೀವನ ?
5. ಕಾಳಿದಾಸನಿಗೆ 'ಅಮರಕವಿ' ಎನ್ನುವುದು ಔಚಿತ್ಯಪೂರ್ಣವೇ ?

**VII. ಈ ಕೆಳಗಿನ ಪ್ರಶ್ನೆಗಳಿಗೆ 2 – 3 ವಾಕ್ಯಗಳಲ್ಲಿ ಉತ್ತರಿಸಿ –** **10 x 02 = 20**

1. ಶರಣಸತಿ – ಲಿಂಗಪತಿ ತತ್ತ್ವವನ್ನು ಅಕ್ಕಮಹಾದೇವಿ ವಚನಗಳ ಹಿನ್ನೆಲೆಯಲ್ಲಿ ಚರ್ಚಿಸಿ.
2. ಅಲ್ಲಮಪ್ರಭುವಿನ ವಚನಗಳ ಮಹತ್ವವನ್ನು ವಿವರಿಸಿ ?
3. 'ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ' ಈ ವಚನದ ಹಿನ್ನೆಲೆಯಲ್ಲಿ ಬಸವಣ್ಣನವರ ವಚನದ ವೈಶಿಷ್ಟ್ಯವನ್ನು ತಿಳಿಸಿ.
4. ವಚನ ಚಳುವಳಿಯ ಉಗಮ ಯಾವ ಶತಮಾನದಲ್ಲಿ ಕಂಡುಬಂದಿತು ? ಅದರ ರೂವಾರಿಗಳಾರು ?

5. 'ಪ್ರಬಂಧ' ಎಂದರೇನು ?

6. ಕನಕದಾಸರು ರಚಿಸಿದ ಕಾವ್ಯಗಳು ಯಾವುವು ?

7. 'ರಥಸಪ್ತಮಿ' ಹಾಗೂ 'ನಮ್ಮ ಮನೆಯ ದೀಪ' ಪ್ರಬಂಧಗಳ ಲೇಖಕರು ಯಾರು ?

8. ಅಕ್ಕಮಹಾದೇವಿ ಹಾಗೂ ಬಸವಣ್ಣನವರ ವಚನಗಳ ಅಂಕಿತ ಯಾವುದು ?

9. 'ಕುಚೇಲೋಪಾಖ್ಯಾನ' ಹಾಗೂ 'ಸಂಸ್ಕೃತಮಾತೆ' ಕವಿತೆಗಳನ್ನು ಬರೆದವರು ಯಾರು ?

10. ವಚನ ಚಳುವಳಿ ವೈಶಿಷ್ಟ್ಯವೇನು ? ನಿಮ್ಮ ಮಾತುಗಳಲ್ಲಿ ವಿವರಿಸಿ.

**VIII. ಇಬ್ಬರು ಲೇಖಕರ ಕಾಲ, ಸ್ಥಳ ಹಾಗೂ ಕೃತಿಗಳನ್ನು ತಿಳಿಸಿರಿ** **02 x 03 = 06**

1. ಕನಕದಾಸರು.
2. ಕುವೆಂಪು.
3. ಹಾ.ಮಾ. ನಾಯಕ.

**IX. ಯಾವುದಾದರೂ ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ –** **01 x 03 = 03**

1. ಬೆಳ್ಳಗಿರುವುದೆಲ್ಲಾ ಹಾಲಲ್ಲ.
2. ಬೇಲಿಯೇ ಎದ್ದು ಹೊಲ ಮೇಯ್ದ ಹಾಗೆ.

**X. ಕೆಳಗಿನ ಎರಡು ವಾಕ್ಯಗಳನ್ನು ಸಂದರ್ಭಸಹಿತ ವಿವರಿಸಿ.** **03 x 03 = 09**

1. 'ಉಳ್ಳವರು ಶಿವಾಲಯ ಮಾಡುವರು'
2. 'ಬೀಜದೊಳಗಿನ ವೃಕ್ಷದಂತೆ'
3. 'ಪರೀಕ್ಷಾ ದಿನ ಬಂದೇ ಬಿಟ್ಟಿತು'

**XI. ಯಾವುದಾದರೂ ಮೂರು ವಿಷಯವನ್ನು ಕುರಿತು ಟಿಪ್ಪಣಿ ಬರೆಯಿರಿ** **03 x 04 = 12**

1. 'ಶಿಲೆಯೊಳಗಿಣ ಪಾವಕನಂತೆ' ....... ವಚನದ ಸಾರಾಂಶ ತಿಳಿಸಿ ?
2. 'ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ' .. ವಚನದ ಸಾರಾಂಶ ಬರೆಯಿರಿ.
3. 'ಕೀರ್ತನ ಪ್ರಕಾರದಲ್ಲಿ ಕನಕದಾಸರು ಹಾಗೂ ಪುರಂದರದಾಸರು ಅಶ್ವಿನಿದೇವತೆಗಳಿದ್ದಂತೆ' ಪರಿಶೀಲಿಸಿ.

**XII. ಒಂದು ವಿಷಯಕ್ಕೆ ಪ್ರಬಂಧ ಬರೆಯಿರಿ** **01 x 10 = 10**

01. ವರದಕ್ಷಿಣೆ ಸಮಸ್ಯೆ.

02. ಯುವಜನಾಂಗದ ಮುಂದಿರುವ ಸವಾಲುಗಳು.

~~~~~ ***** ~~~~~
~~~~~